2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಸತ್ರ ಮೊಕದ್ದಮೆ ಸಂಖ್ಯೆ 66/2012

| | | | |
|---|---|---|---|
| ಹೆಸರು | ಃ | ಯು. ಶರಣಪ್ಪ | ಫ್ರಾಸಾ-03 |
| ತಂದೆಯ ಹೆಸರು | ಃ | ಚನ್ನಬಸಪ್ಪ | ಚಾಸಾ-20 |
| ವಯಸ್ಸು | ಃ | 62 ವರ್ಷ | |
| ಉದ್ಯೋಗ | ಃ | ನಿವೃತ್ತ ಎಸ್.ಪಿ. | |
| ವಾಸಸ್ಥಳ | ಃ | ಆದಾಪೂರ, ಜಿಃ ಕೊಪ್ಪಳ | |

ದಿನಾಂಕಃ 28-02-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

## ಸಾಕ್ಷಿಯ ವಿಚಾರಣೆಃ ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ

### ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ

ಜುಲೈ 2011 ರಿಂದ ಸೆಪ್ಟೆಂಬರ್ 2013 ರವರೆಗೆ ಸಿ.ಪಿ.ಐ., ಹುನಗುಂದ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 16-10-2011 ರಂದು ಇಲಕಲ್ಲ ಪಿ.ಎಸ್.ಐ., ರವರಿಂದ ತನಿಖೆಯನ್ನು ವಹಿಸಿಕೊಂಡು, ಗುನ್ಹಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ-2 ಮತ್ತು 3 ಇವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿ, ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಅಂತಾ ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಮುದ್ದೆಮಾಲು-1 ಬಡಿಗೆಯನ್ನು ಜಪ್ತಪಡಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಕಾಲಕ್ಕೆ ತಯಾರಿಸಿದ ಕಚ್ಚಾ ನಕಾಶೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಅಂತಾ ಗುರುತಿಸಲಾಯಿತು.

ಅದೇ ದಿನ ಮಧ್ಯಾಹ್ನ 12-00 ರಿಂದ 1-00 ಗಂಟೆಯ ಅವಧಿಯಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಆರೋಪಿತರು ತೆಗೆದುಕೊಂಡು ವಾಹನವನ್ನು ಪಂಚರ ಸಮಕ್ಷಮ ನಿಪಿ-6 ರಂತೆ ಜಪ್ತ ಪಂಚನಾಮೆಯನ್ನು ಮಾಡಿ ಪಿರ್ಯಾದಿ ಹಾಜರಪಡಿಸಿದಂತೆ ಜಪ್ತ ಮಾಡಿಕೊಂಡಿರುತ್ತೇನೆ. ನಿಪಿ-6 ಪಂಚನಾಮೆಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಅಂತಾ ಗುರುತಿಸಲಾಯಿತು. ಆ ಕಾಲಕ್ಕೆ ನಿಪಿ-2 ರಿಂದ 5 ಭಾವಚಿತ್ರ ತೆಗೆಸಿರುತ್ತೇನೆ. ಚಾಸಾ-1 ಈತನ ಮರು ಹೇಳಿಕೆ

ಹಾಗೂ ಚಾಸಾ-6 ರಿಂದ 9 ಇವರ ಹೇಳಿಕೆ ಹಾಗೂ ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿಃ 10-01-2012 ರಂದು ಆರೋಪಿತರ ಪತ್ತೆ ಕುರಿತು ಸಿಬ್ಬಂದಿ ನೇಮಿಸಿದ್ದು, ಅದೇ ದಿನ ಸಿಬ್ಬಂದಿ ಜನರಾರದ ಚಾಸಾ-11 ಇವರು ಆರೋಪಿ-1 ಮತ್ತು 2 ಇವರನ್ನು ನನ್ನ ಮುಂದೆ ಹಾಜರಪಡಿಸಿರುತ್ತಾರೆ. ಆ ಬಗ್ಗೆ ಮೂರು ವರದಿ ನೀಡಿರುತ್ತಾರೆ. ಸಾಕ್ಷಿಯು ಮೂರು ವರದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-9 ರಿಂದ 11 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-9(ಎ) ದಿಂದ 11(ಎ) ಅಂತಾ ಗುರುತಿಸಲಾಯಿತು. ಆದೇ ದಿನ ಆರೋಪಿತರನ್ನು ವಿಚಾರಣೆ ಮಾಡಿ ಅವರ ಸ್ವಖುಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿತರನ್ನು ಗುರುತಿಸಿದ ಬಗ್ಗೆ ಎಲ್ಲ ಸಾಕ್ಷಿದಾರರ ಮರು ಹೇಳಿಕೆ ಪಡೆದುಕೊಂರುತ್ತೇನೆ.

ದಿಃ 24-01-2012 ರಂದು ಮಾನ್ಯ ನ್ಯಾಯಾಲಯದ ಅನುಮತಿಯೊಂದಿಗೆ ತಹಶೀಲ್ದಾರ, ಹುನಗುಂದ ಇವರಿಗೆ ಗುರುತಿನ ಕವಾಯತು ನಡೆಸಲು ಪತ್ರ ಬರೆದುಕೊಂಡಿರುತ್ತೇನೆ. ಸದರಿಯವರು ಬಾಗಲಕೋಟೆ ಬಂದಿಖಾನೆಯಲ್ಲಿ ಆರೋಪಿತರ ಗುರುತಿನ ಕವಾಯತು ನಡೆಸಿ ನನಗೆ ವರದಿ ಸಲ್ಲಿಸಿರುತ್ತಾರೆ. ತಹಶೀಲ್ದಾರ ರವರು ನೀಡಿದ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-12 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಅಂತಾ ಗುರುತಿಸಲಾಯಿತು. ಎರಡು ಗಾಯದ ಪ್ರಮಾಣ ಪತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-13 ಮತ್ತು 14 ಅಂತಾ ಗುರುತಿಸಲಾಯಿತು. ಚಾಸಾ-17 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತರನ್ನು ನಾನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಅವರನ್ನು ನಾನು ನೋಡಿದರೆ ಗುರುತಿಸುತ್ತೇನೆ. ನಂತರ ದೋ.ಪ. ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

Sd/-
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ.